# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:58, ಹೊಸ ತಿಪ್ಪಸಂದ್ರ

## ವಾರ್ಡ್ ಸಮಿತಿ ಸಭೆ, ದಿನಾಂಕ: 04-09-2021 ರ ಸಭಾ ನಡವಳಿಗಳು

ದಿನಾಂಕ: 04-09-2021 ರಂದು ಬೆಳಗ್ಗೆ 11.30 ಗಂಟೆಗೆ ವಾರ್ಡ್-58 ಹೊಸ ತಿಪ್ಪಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು**

| ಕ್ರಮ ಸಂ | ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು | ಪ್ರವರ್ಗ |
|---|---|---|
| 1 | ಶ್ರೀ.ಹರೀಶ್‌ಕುಮಾರ್ | ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿರವರು |
| 2 | ಶ್ರೀ.ಎನ್.ನರಸಿಂಹಯ್ಯ | ಕಾರ್ಯದರ್ಶಿ/ಕಿರಿಯ ಅಭಿಯಂತರರು |
| 3 | ಶ್ರೀ.ರವಿ | ಸದಸ್ಯರು |
| 4 | ಶ್ರೀಮತಿ.ಸರಸ್ವತಿ ಬಾಬು | ಸದಸ್ಯರು |
| 5 | ಶ್ರೀಮತಿ.ಜಯಶ್ರೀ | ಸದಸ್ಯರು |
| 7 | ಶ್ರೀ.ಬಾಲಾಜಿ. ಕೆ. ವೈದ್ಯನಾಥನ್, ರೆಸಿಡೆಂಟ್ಸ್ ಫೋರಮ್, ಎಲ್.ಐ.ಸಿ ಕಾಲೋನಿ | ಸದಸ್ಯರು |

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂಧಿಗಳು**

1) ಶ್ರೀ.ಹುಸೇನಪ್ಪ, ಕಿರಿಯ ಆರೋಗ್ಯ ಪರಿವೀಕ್ಷಕರು
2) ಶ್ರೀ.ದಿನಕರ್ ಘನತ್ಯಾಜ್ಯ ನಿರ್ವಹಣೆ ಮೇಲ್ವಿಚಾರಕರು
3) ಶ್ರೀ.ಲಕ್ಷ್ಮಣ್, ಮೌಲ್ಯ ಮಾಪಕರು
4) ಶ್ರೀ.ಮಂಜುನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
5) ಶ್ರೀ/ಶ್ರೀಮತಿ.ಕುಸುಮ ಸಹಾಯಕ ಅಭಿಯಂತರರು, ಬೆಸ್ಕಾಂ
6) ಶ್ರೀ.ಲೋಹಿತ್ ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ

ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತ ಕೋರಿದರು. ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಆರೋಗ್ಯ ಇಲಾಖೆ** | |
| 1 | ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ವಾಕ್ಸಿನೇಶನ್‌ನ್ನು ತೆಗೆದುಕೊಳ್ಳಲು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ, ಕ್ರಮ ಕೈಗೊಳ್ಳಲು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |

| | | |
|---|---|---|
| 2 | ಅಧ್ಯಕ್ಷರು ಮಾತನಾಡಿ ಕೋವಿಡ್-19 ಪಾಸಿಟಿವ್ ಬಂದವರಿಗೆ ಕ್ವಾರಂಟೈನ್ ಮಾಡುವ ಬಗ್ಗೆ ವಿವರಣೆಯನ್ನು ಕೋರಲಾಗಿದ್ದು, ವಾರ್ಡ್‌ನ ಕಾರ್ಯದರ್ಶಿಗಳು ಮಾತನಾಡಿ ಕೋವಿಡ್-19 ಪಾಸಿಟಿವ್ ಬಂದಂತಹ ವ್ಯಕ್ತಿಗಳನ್ನು ಗುರುತಿಸಿ, ಕ್ವಾರಂಟೈನ್ ಮಾಡಲಾಗುತ್ತಿದೆ ಎಂದು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |
| | **ಘನತ್ಯಾಜ್ಯ ನಿರ್ವಹಣೆ** | |
| 1 | ಶ್ರೀ.ಬಾಲಾಜಿ ಸದಸ್ಯರು ಮಾತನಾಡಿ 6ನೇ ಮುಖ್ಯರಸ್ತೆ ಮತ್ತು 9ನೇ ಅಡ್ಡರಸ್ತೆ ಜಂಕ್ಷನ್ ಎಲ್.ಐ.ಸಿ ಕಾಲೋನಿ, ಎನ್.ಸಿ.ಇ ಶಾಲೆಯ ಹತ್ತಿರ ಇರುವ ಕಸವನ್ನು ತೆರವುಗೊಳಿಸಲು ಕೋರಲಾಯಿತು. | ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು |
| 2 | ವಾರ್ಡ್ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗಿರುವ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಹಾಗೂ ಸೊಳ್ಳೆ ಔಷದಿ ಸಿಂಪಡಿಸಲು ಶ್ರೀಮತಿ.ಜಯಶ್ರೀ ರವರು ಕೋರಿರುತ್ತಾರೆ.<br>ಅದರಂತೆ ಶ್ರೀ.ಹುಸೇನಪ್ಪ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹಾಗೂ ಸೊಳ್ಳೆ ಔಷದಿ ಸಿಂಪಡಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸುವುದಾಗಿ ತಿಳಿಸಿರುತ್ತಾರೆ. | ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು |
| | **ತೋಟಗಾರಿಕಾ ಇಲಾಖೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಮಳೆ-ಗಾಳಿಯಿಂದಾಗಿ ಬಿದ್ದಿರುವ ಮರ-ಕೊಂಬೆಗಳನ್ನು ತೆರವುಗೊಳಿಸಲು ಶ್ರೀ.ಬಾಲಾಜಿ ಕೆ ರವರು ತಿಳಿಸಿರುತ್ತಾರೆ | ಅಧೀಕ್ಷಕರು ತೋಟಗಾರಿಕಾ ಇಲಾಖೆ |
| | **ಬೆಸ್ಕಾಂ ಇಲಾಖೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಸಮರ್ಪಕವಾಗಿರುವುದಿಲ್ಲ ಇದನ್ನು ಸರಿಪಡಿಸಲು ಸಮಿತಿ ಸದಸ್ಯಯರು ಕೋರಿದರು.<br>ಅದರಂತೆ ಸದರಿ ವಿಷಯದ ಬಗ್ಗೆ ಶ್ರೀ.ಮಂಜುನಾಥ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕುಸುಮ ಸಹಾಯಕ ಅಭಿಯಂತರರು ಕ್ರಮ ಕೈಗೊಳ್ಳಲು ಸೂಚಿಸಿದರು. | **Assistant Engineer Bescom** |
| 2 | 7ನೇ ಮುಖ್ಯರಸ್ತೆ ಮತ್ತು 9ನೇ ಮುಖ್ಯರಸ್ತೆ ಎಲ್.ಐ.ಸಿ ಕಾಲೋನಿ ಇಲ್ಲಿ ವಿದ್ಯುತ್ ಸರಬರಾಜು ಸಮರ್ಪಕವಾಗಿರುವುದಿಲ್ಲ ಇದನ್ನು ಸರಿಪಡಿಸಲು ಸಮಿತಿ ಸದಸ್ಯಯರು ಕೋರಿದರು<br>ಅದರಂತೆ ಸದರಿ ವಿಷಯದ ಬಗ್ಗೆ ಶ್ರೀ.ಮಂಜುನಾಥ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕುಸುಮ ಸಹಾಯಕ ಅಭಿಯಂತರರು ಕ್ರಮ ಕೈಗೊಳ್ಳಲು ಸೂಚಿಸಿದರು. | **Assistant Engineer Bescom** |
| | **ಬೆಸ್ಕಾಂ ಇಲಾಖೆ** | |
| 1 | ಶ್ರೀಮತಿ.ಜಯಶ್ರೀ ಮತ್ತು ಶ್ರೀ.ರವಿ ವಾರ್ಡ್ ಸಮಿತಿ ಸದಸ್ಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಕಲುಷಿತ ಗೊಂಡಿರುವ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.<br>ಶ್ರೀ.ಲೋಹಿತ್ ಸಹಾಯಕ ಅಭಿಯಂತರರು ಸದರಿ ದೂರಿನ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. | **Assistant Engineer BWSSB** |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು

ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:58-ಹೊಸ ತಿಪ್ಪಸಂದ್ರ

ಅಧ್ಯಕ್ಷರು

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:58-ಹೊಸ ತಿಪ್ಪಸಂದ್ರ